



# ಕಮಂಡಲುಕಾಯಿ

■ ಚಿತ್ರ– ಬರಹ:
**ಎಂ.ಎನ್. ಜೋಷಿ**

**ಪೌ**ರಾಣಿಕ ಕಾಲದ ಜಟಾಧಾರಿಗಳಾದ ಋಷಿಮುನಿಗಳ ರೂಪವನ್ನು ಕಲ್ಪಿಸಿಕೊಂಡಾಗ, ಅವರ ಕೈಯಲ್ಲಿರುತ್ತಿದ್ದ ದಂಡ ಹಾಗೂ ಕಮಂಡಲ ಕೂಡ ಮನದಲ್ಲಿ ಮೂಡಿ ಬರುತ್ತದೆ. ಕಮಂಡಲವನ್ನು ಒಂದು ಜಾತಿಯ ಗಿಡದಲ್ಲಿ ಬಿಡುತ್ತಿದ್ದ ಗೋಲಾಕಾರದ ಗಟ್ಟಿ ಕಾಯಿಯಿಂದ ಮಾಡುತ್ತಿದ್ದುದರಿಂದ ಇದಕ್ಕೆ ಕಮಂಡಲುಕಾಯಿ ಗಿಡವೆಂದು ಹೆಸರು ಬಂದಿದೆ.

ಆಂಗ್ಲ ಭಾಷೆಯಲ್ಲಿ **Mexican calabash** ಮತ್ತು **Gaurd** ಎಂಬ ಹೆಸರುಗಳಿದ್ದು, ಸಸ್ಯಶಾಸ್ತ್ರದ ಪ್ರಕಾರ ಇದಕ್ಕಿರುವ ಹೆಸರು ಕ್ರೆಸೆಂಟಿಯಾ ಅಲಾಟ– ಬಿಗ್ನೋನಿಯೇಸಿ (**Crescentia alata–Bignoniocea**) ಮೂಲತಃ ದಕ್ಷಿಣ ಮೆಕ್ಸಿಕೊ ಮತ್ತು ಮಧ್ಯೆ ಅಮೆರಿಕದ ಈ ಸಸ್ಯವನ್ನು ಅಲ್ಲಿ ಕೃಷಿ ಅರಣ್ಯ ಗಿಡವಾಗಿ ಬೆಳೆಸುತ್ತಾರೆ. ಆಫ್ರಿಕಾದ ದಕ್ಷಿಣ ಭಾಗದಲ್ಲೂ ಹೆಚ್ಚಾಗಿದೆ.

ಕಮಂಡಲುಕಾಯಿ ಗಿಡವು 25 ರಿಂದ 35 ಅಡಿಗಳವರೆಗೆ ಬೆಳೆಯುತ್ತದೆ. ಸಾಮಾನ್ಯವಾಗಿ ಒಂದು ದೇಟಿಗೆ ಮೂರು ಮೂರು ಎಲೆಗಳಿದ್ದು, ಅವು 3 ರಿಂದ 5 ಇಂಚುಗಳನ್ನು ಉದ್ದ ಇರುತ್ತದೆ. 5 ದಳ–ಗಳಿರುವ ಇದರ ಹೂವು ಕೊಳವೆ ಆಕಾರದಲ್ಲಿದ್ದು ಗೆರೆಗೆರೆಗಳಿಂದ ಕೂಡಿರುವ ಹೂವಿನ ಒಳಭಾಗವು. ಹಳದಿ ಹಸಿರು ಮಿಶ್ರಿತವಾಗಿದ್ದರೆ, ಹೊರಭಾಗವು ಕಂದು ಬಣ್ಣದಿಂದ ಕೂಡಿದೆ.

ರಾತ್ರಿ ಸಮಯದಲ್ಲಿ ಮಾತ್ರ ಹೂವುಗಳು ಅರಳುವುದು ಇದರ ವಿಶೇಷ. ಪರಾಗಸ್ಪರ್ಶವು ಬಾವಲಿಗಳಿಂದ ನಡೆಯುತ್ತಿದ್ದು, ಹಗಲಿನಲ್ಲಿ ಹೂವು ಬಾಡುತ್ತದೆ. 7 ರಿಂದ 10 ಸೆಂ.ಮೀ. ಗಾತ್ರದ

(8ನೇ ಪುಟ ನೋಡಿ)